ಪಿ.ಡಬ್ಲ್ಯೂ: 01.

ದಿನಾಂಕಃ 22-09-2018 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಂ.ಪಿ.ಎನ್. ವಕೀಲರಿಂದಃ

ದಿಃ 26-05-2017 ರಂದು ನಾನು ಡಿ. ವಾಯ್ ಎಸ್ ಪಿ ರವರಿಗೆ ನೀಡಿರುವ ದೂರಿನ ಪ್ರತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ. ನನ್ನ ಪ್ರಕಾರ ಮೊದಲು ಕೊಟ್ಟ ದೂರು ನಿಪಿ-17 ರಲ್ಲಿ ಇದೆ ಎಂದರೆ ಸಾಕ್ಷಿಯು ನನಗೆ ದಿನಾಂಕ ನೆನಪಿಲ್ಲಾ. ನಿಪಿ-17 ರಲ್ಲಿ ಅಸಲು ದಾವೆ ಸಂಖ್ಯೆ 198/2017 ರ ಉಲ್ಲೇಖ ಮಾಡಿದ್ದೇನೆ. ನನ್ನ ದಾವೆಯನ್ನು ಪುಷ್ಠೀಕರಿಸಲು ನಿಪಿ-17 ನ್ನು ಸೃಷ್ಠಿ ಮಾಡಿದ್ದೇನೆಂದರೆ ಸರಿಯಲ್ಲಾ. ಹಾಗೆಯೇ ಉಳಿದ ಪುಕಾರಗಳನ್ನು ಸುಳ್ಳು ಸೃಷ್ಟಿ ಮಾಡಿದ್ದೇನೆಂದರೆ ಸರಿಯಲ್ಲಾ. ಮಧ್ಯಂತರ ಅರ್ಜಿ 1/2018 ರ ಆದೇಶದ ವಿರುದ್ಧ ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದೇನೆಂದರೆ ಸರಿ. ಸದರಿ ಮೇಲ್ಮನವಿಯು ವಜಾಗೊಂಡಿದೆ ಎಂದರೆ ಸಾಕ್ಷಿಯು ನಾನು ಓದಿಲ್ಲ ಎಂದಿದ್ದಾರೆ. ಸಾಕ್ಷಿಗೆ ಎಂ. ಎ. 1/2018 ರ ಆದೇಶದ ದೃಢೀಕೃತ ನಕಲು ಪ್ರತಿ ತೋರಿಸಿ , ಸಾಕ್ಷಿಗೆ ಅದನ್ನು ಓದಿ, ಅದರಲ್ಲಿ ಕಲಂಗಳು ಇದ್ದು, ಅವುಗಳು ಗೊತ್ತಾಗುತ್ತಿಲ್ಲ ಎಂದಿದ್ದಾರೆ. ಸಾಕ್ಷಿಗೆ ದಾಖಲೆಯನ್ನು ತೋರಿಸಿ , ಅದು ನಕ್ಷೆಯಾಗಿದ್ದು, ಸಾಕ್ಷಿ ಅದನ್ನು ನೋಡಿ ಒಪ್ಪಿರುವುದಿಲ್ಲ.

ಸ.ನಂಃ 83/2 ರ ಚೆಕ್ಕುಬಂದಿ ನನಗೆ ನಿಖರವಾಗಿ ಗೊತ್ತಿಲ್ಲಾ. ಸಾಕ್ಷಿಗೆ ಐದು ಪೋಟೋಗಳನ್ನು ತೋರಿಸಿ, ಅದರಲ್ಲಿ ಬರುವ ಜಾಗ ದಾವಾ ಸ್ವತ್ತಿಗೆ ಸಂಬಂಧಪಟ್ಟಿದ್ದು ಎಂದರೆ ಸಾಕ್ಷಿಯು ಒಪ್ಪಿರುವುದಿಲ್ಲ. ಸಾಕ್ಷಿಯು ಅವು ಐದು ಪೊಟೋಗಳ ಪೈಕಿ ಒಂದು ಪೋಟೊವನ್ನು ಸ,ನಂಃ 83/2 ಕ್ಕೆ ಸಂಬಂಧಿಸಿದ್ದು ಎಂದು ಒಪ್ಪಿರುತ್ತಾರೆ. ಆ ಪೋಟೊವನ್ನು ನಿಡಿ-2 ಮತ್ತು ಸಿಡಿಯನ್ನು ನಿಡಿ-3 ಎಂದು ಗುರುತಿಸಲಾಯಿತು. ಮೊದಲಿಗೆ ಸ.ನಂಃ 83/2 ಬಂದು, ನಂತರದಲ್ಲಿ ದಾವಾ ಸ್ವತ್ತು ಬರುತ್ತದೆ ಎಂದರೆ ಸರಿ. ಮೊದಲಿಗೆ ಗೇಟ್ ಬಂದು, ನಂತರದಲ್ಲಿ ಲೇಬರ್ ಲೈನ್ ಬರುತ್ತದೆ ಎಂದರೆ ಸರಿ . ಗೇಟಿನಿಂದ ಲೇಬರ್ ಲೈನ್ ಸುಮಾರು 50 ರಿಂದ 60 ಅಡಿ ಅಂತರ ಇದೆ. ಸಾಕ್ಷಿ ಮುಂದುವರೆದು ಗೇಟನ್ನು ನಾನೇ ಹಾಕಿಸಿದ್ದೇನೆ ಎಂದಿದ್ದಾರೆ. ಇದಾದ ನಂತರ ಎಡ ಭಾಗದಲ್ಲಿ ರಸ್ತೆ ಬಂದಿದ್ದು, ಅದು 15 ಅಡಿ ಅಂತರದಲ್ಲಿದೆ. ಸ,ನಂಃ 83/2 ರ ಗೇಟಿನಿಂದ ಎಡಭಾಗದಲ್ಲಿ ರಸ್ತೆ ಇದೆ ಎಂದರೆ ಸಾಕ್ಷಿಯು ಖಾಸಗಿಯಾಗಿ ನಾವೇ ಮಾಡಿಕೊಂಡಿದ್ದೇವೆ ಎಂದಿದ್ದಾರೆ. ಸದರಿ ರಸ್ತೆಯು ಸ.ನಂಃ 83/2 ಮತ್ತು ದಾವಾ ಸ್ವತ್ತಿನಲ್ಲಿ ಹಾದುಹೋಗಿದೆ ಎಂದರೆ

ಸರಿಯಲ್ಲಾ. ಲೇಬರ್ ಲೈನನಿಂದ ದಾವಾ ಸ್ವತ್ತು ಎಷ್ಟು ಅಂತರದಲ್ಲಿದೆ ಎಂದರೆ ಸಾಕ್ಷಿಯು ಸರಿಯಾಗಿ ಗೊತ್ತಿಲ್ಲಾ ಎಂದಿದ್ದಾರೆ. ಗೇಟು ಲೇಬರ್ ಲೈನನ್ನು ನಾನೇ ಕಟ್ಟಿಸಿದ್ದೇನೆ, ಅವುಗಳು ಸ.ನಂಃ 83/2 ರಲ್ಲಿ ಇದೆ. ಸ.ನಂಃ 83/2 ಕ್ಕೆ ಸಂಬಂಧಪಟ್ಟಂತೆ ಈ ನ್ಯಾಯಾಲಯದಲ್ಲಿ ದಾವೆ ಹೂಡಿಲ್ಲ.

ದಾವಾ ಖಂಡಿಕೆ 11 ರಲ್ಲಿ ಹೇಳಿದಂತೆ ವಾಚ್ ಮನ್ ಶೆಡ್ಡು, ಕೌ ಶೆಡ್ಡು ಮತ್ತು ಗೇಟ್ ನ್ನು ದಾವಾ ಸ್ವತ್ತಿನಲ್ಲಿ ಕಟ್ಟಿಸಿದ್ದೇನೆಂದು ಹೇಳಿರುವುದಿಲ್ಲ. ಸಾಕ್ಷಿ ಮುಂದುವರೆದು ಎಲ್ಲಾ ಆಸ್ತಿಗಳನ್ನು ಖರೀದಿ ಮಾಡಿದ್ದರಿಂದ, ಎಲ್ಲವನ್ನೂ ಸೇರಿಸಿ ಕಟ್ಟಿದ್ದೇನೆ ಎಂದಿದ್ದಾರೆ. ದಾವಾ ಸ್ವತ್ತು ಖರೀದಿ ಮಾಡುವ ಪೂರ್ವದಲ್ಲಿ ಬೋರ್ ವೆಲ್ ಇತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ನೀರು ಬರುತ್ತಿರಲಿಲ್ಲ ಎಂದಿದ್ದಾರೆ. ಅದನ್ನು ಹೊರೆತುಪಡಿಸಿ ಬೇರೆ ಯಾವ ಬೋರ್ ವೆಲ್ ಇಲ್ಲ. ಆದ್ದರಿಂದ ದಾವಾ ಖಂಡಿಕೆ 11 ರಲ್ಲಿ ಹೇಳಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲಾ. 2013 ರಿಂದ 2017 ರವರೆಗೆ ದಾವಾ ಸ್ವತ್ತಿನ ವಿಚಾರವಾಗಿ ಯಾವುದೇ ಗಲಾಟೆ , ಪೊಲೀಸ್ ಪಿರ್ಯಾದಿಗಳು ಆಗಿಲ್ಲ ಎಂದಿದ್ದಾರೆ. 2015 ರಲ್ಲಿ ವಿವಾಹ ವಿಚ್ಛೇದನೆಯು ಬಂತು ಎಂದರೆ ಸರಿ. ಅದರಲ್ಲಿ ಪ್ರತಿವಾದಿಯ ಮುಖ್ಯ ವಿಚಾರಣೆ ಮುಗಿದಿದೆ ಎಂದರೆ ಸರಿ. ತದಂನಂತರ ಮಡಿಕೇರಿ ಕುಟುಂಬ ನ್ಯಾಯಾಲಯಕ್ಕೆ ವರ್ಗಾವಣೆ ಕೋರಿ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದೇನೆ. ಸದರಿ ಅರ್ಜಿಯು ವಿರಾಜಪೇಟೆಗೆ ವರ್ಗಾವಣೆಗೊಂಡಿತ್ತು ಎಂದರೆ ಸರಿ. ಪ್ರತಿವಾದಿ ವಕೀಲರಾದ ಕಾರಣ ವಿರಾಜಪೇಟೆಗೆ ಸದರಿ ಅರ್ಜಿಯನ್ನು ವರ್ಗಾವಣೆ ಆಯಿತು ಎಂದರೆ ಸರಿ . ತದನಂತರ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆ ಹೂಡಿದ್ದೇನೆಂದರೆ ಸರಿಯಲ್ಲಾ. ನಾನು ಸ.ನಂಃ 83/2 ರ ತೆರಿಗೆ ಪಾವತಿ ಮಾಡಿದ್ದೇನೆ. ಸಾಕ್ಷಿ ಮುಂದುವರೆದು ದಾವಾ ಹಾಕುವ ಹೊತ್ತಿಗೆ ಪಾವತಿ ಮಾಡಿರುವುದಿಲ್ಲ. ಅದರ ವಿಚಾರವಾಗಿ ಕಂದಾಯ ರಶೀದಿಗಳನ್ನು ಹಾಜರುಪಡಿಸಿರುವುದಿಲ್ಲ.

ನನ್ನ ಮಗ ಮೈಸೂರಿನ ಆಸ್ತಿಯ ಮೇಲೆ ಸಾಲ ತೆಗೆದುಕೊಂಡಿದ್ದನು ಎಂದರೆ ಸರಿ. ಸದರಿ ಆಸ್ತಿಯು ನನ್ನ ಮಗನ ಹೆಸರಿನಲ್ಲಿದೆ. ಮೂಲತಃ ಸದರಿ ಆಸ್ತಿಯು ನನ್ನ ಮಾವನ ಹೆಸರಿನಲ್ಲಿತ್ತು. ನನ್ನ ಮಾವನಿಗೆ ಮೂರು ಜನ ಹೆಣ್ಣುಮಕ್ಕಳು. ಅದರಲ್ಲಿ ಒಬ್ಬರಿಗೆ ಮದುವೆಯಾಗಿದೆ. ಅವರು ಜೀವಿತ ಅವಧಿಯಲ್ಲಿ ನನ್ನ ಮಾನವನವರು ಎರಡು ಭಾಗವಾಗಿ ನನ್ನ ಹೆಂಡತಿಗೆ ಮತ್ತು ಅವರ ತಂಗಿಗೆ ಭಾಗ ಮಾಡಿದ್ದಾರೆ ಎಂದರೆ ಸಾಕ್ಷಿಯು ಅದು ಆಂತರಿಕ ಕುಟುಂಬದ ವ್ಯವಸ್ಥೆ ಎಂದಿದ್ದಾರೆ. ಅದನ್ನು ನನ್ನ ನಾದಿಣಿಗೆ ಅವರ ಜೀವನಕ್ಕೋಸ್ಕರ ಒಂದು ಭಾಗವನ್ನು ಅವರಿಗೆ ಮತ್ತು ಮತ್ತೊಂದು ಭಾಗವನ್ನು ಬಾಡಿಗೆಗೆ ಕೊಟ್ಟಿರುತ್ತೇವೆ. ನನ್ನ ನಾದಿಣಿ ಅವರ ಅಕ್ಕನ ಜೊತೆ ಇದ್ದಾರೆ. ನಾನು

ಕಟ್ಟಿಸಿದ ಮನೆ ಬಾಡಿಗೆಗೆ ಕೊಟ್ಟಿದ್ದೇವೆ. ನನ್ನ ಮಾವನ ಆಸ್ತಿಯನ್ನು ಹೊಡೆದುಕೊಳ್ಳುವ ಸಲುವಾಗಿ ನನ್ನ ನಾದಿಣಿಯನ್ನು ಓಡಿಸಿ ಮನೆಯನ್ನು ಬಾಡಿಗೆಗೆ ಕೊಟ್ಟಿದ್ದೇವೆಂದರೆ ಸರಿಯಲ್ಲಾ. ರೂಪ ಸುದರ್ಶನ ಎಂದರೆ ನನ್ನ ಸೊಸೆ. ರೂಪ ಸುದರ್ಶನ ರವರು ನನ್ನ ಮತ್ತು ನನ್ನ ಮಗನ ವಿರುದ್ಧ ದೂರನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲಾ. ದಾವಾ ಸ್ವತ್ತನ್ನು ಪ್ರತಿವಾದಿಯೇ ಖರೀದಿ ಮಾಡಿದ್ದು , 2013 ರಿಂದ ಇಲ್ಲಿಯವರೆಗೆ ಪ್ರತಿವಾದಿಯೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲಾ. ಮಧ್ಯಂತರ ಆದೇಶದ ಉಲ್ಲಂಘನೆಯಾಗಿದೆ ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿದ್ದು, ಯಾವುದೇ ಉಲ್ಲಂಘನೆ ಆಗಿಲ್ಲ ಎಂದರೆ ಸರಿಯಲ್ಲಾ. ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ದಾಖಲೆಗಳು ಸೃಷ್ಟಿ ಮಾಡಿದ್ದೇನೆಂದರೆ ಸರಿಯಲ್ಲಾ. ನಾನು ತೆಗೆದುಕೊಂಡಿರುವ ಬೀಜಗಳ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದು, ಅದನ್ನು ಸ.ನಂಃ 83/2 ಕ್ಕೆ ಅದರ ಸಲುವಾಗಿ ಖರೀದಿ ಮಾಡಿದ್ದೇನೆಂದರೆ ಸಾಕ್ಷಿಯು ಎಲ್ಲಾ ಜಮೀನಿಗೂ ಖರೀದಿ ಮಾಡಿದ್ದೇನೆ ಎಂದಿದ್ದಾರೆ. ನಾನು ಖರೀದಿ ಮಾಡಿರುವ ಜಾಗಕ್ಕೂ ಮತ್ತು ದಾವಾ ಸ್ವತ್ತಿಗೂ ಯಾವುದೇ ರೀತಿಯಾದಂತಹ ತಂತಿ ಬೇಲಿ ಹಾಕಿರುವುದಿಲ್ಲ ಎಂದರೆ ಸಾಕ್ಷಿಯು ನಾವು ಒಂದೇ ಕುಟುಬಂದ ಹಾಗೇ ಇದ್ದೇವು ಎಂದಿದ್ದಾರೆ. ಮೈಸೂರಿನಲ್ಲಿರುವ ನನ್ನ ಮಗನ ಆಸ್ತಿಯಲ್ಲಿ ಸಾಲವನ್ನು ಪಡೆಯುವ ಸಲುವಾಗಿ ಪ್ರತಿವಾದಿಯ ಆಸ್ತಿಯನ್ನು ಭದ್ರತೆಗಾಗಿ ಕೇಳಿದ್ದರು ಎಂದರೆ ಸರಿಯಲ್ಲಾ. ಆದ್ದರಿಂದ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲಾ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.